## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯಲ್ಲಿ ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್ ಇತರೆ ಪರಿಕರಗಳನ್ನು ಖರೀದಿಸುವ ಸಲುವಾಗಿ Technical Advisory Panel (TAP) ಸಮಿತಿಯನ್ನು ರಚಿಸುವ ಬಗ್ಗೆ.

ಓದಲಾಗಿದೆ: 1) ಸರ್ಕಾರದ ಆದೇಶ ಸಂ:ಮಮಇ:113:ಪಿಹೆಚ್‌ಪಿ:2014, ದಿನಾಂಕ: 03.07.2014

2) ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ರವರ ಪತ್ರ ಸಂಖ್ಯೆ:ವಿಹಿನಾಸಇ:ಯೋ.ಶಾ:ಹೊಸಯೋಜನೆ: ಲ್ಯಾಪ್‌ಟ್ಯಾಪ್:21:2013, ದಿನಾಂಕ: 12.08.2014

3) ಸರ್ಕಾರದ ಆದೇಶ ಸಂ: ಸಿಆಸುಇ:134:ವಿಮಾಆ:2009, ದಿನಾಂಕ:19.07.2010

****

**ಪ್ರಸ್ತಾವನೆ:**

ಎಸ್.ಎಸ್.ಎಲ್.ಸಿ ಹಾಗೂ ನಂತರ ವ್ಯಾಸಂಗ ಮಾಡುತ್ತಿರುವ ಅಂಧ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಉತ್ತೇಜಿಸುವ ಸಲುವಾಗಿ ಟಾಕಿಂಗ್ ಲ್ಯಾಪ್‌ಟ್ಯಾಪ್‌ನ್ನು ನೀಡುವ ಯೋಜನೆಗೆ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 03.07.2014ರ ಆದೇಶದಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ.

ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆರವರು ಟಾಕಿಂಗ್ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ತಾಂತ್ರಿಕ ಅನುಮೋದನೆ ಪಡೆಯಲು ಕ್ರಿಯಾ ಯೋಜನೆಯನ್ನು ಮೇಲೆ ಕ್ರಮ ಸಂಖ್ಯೆ (2) ರಲ್ಲಿ ಓದಲಾದ ಪತ್ರದೊಂದಿಗೆ ಸಲ್ಲಿಸಿರುತ್ತಾರೆ. ಸರ್ಕಾರಿ ಇಲಾಖೆಗಳಿಗೆ ಹಾರ್ಡ್‌ವೇರ್, ಸಾಫ್ಟ್‌ವೇರ್ ಮತ್ತು ಇತರೆ ಪರಿಕರಗಳನ್ನು ಪಡೆಯಲು ಇಲಾಖಾ ತಾಂತ್ರಿಕ ಸಮಿತಿಗೆ ತಾಂತ್ರಿಕ ಸದಸ್ಯರನ್ನು ನಾಮನಿರ್ದೇಶನ ಮಾಡಿ ಆಯಾ ಇಲಾಖೆಗಳು ಈ ತಾಂತ್ರಿಕ ಸದಸ್ಯರೊಂದಿಗೆ ತಾಂತ್ರಿಕ ಸಲಹಾ ಸಮಿತಿಗಳನ್ನು ಪುನರ್‌ರಚಿಸಿಕೊಳ್ಳಬೇಕೆಂದು ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ತಿಳಿಸಲಾಗಿದೆ. ಈ ಹಿನ್ನೆಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಸಂಬಂಧಿಸಿದಂತೆ Technical Advisory Panel (TAP) ಸಮಿತಿಯನ್ನು ಪುನರ್ ರಚಿಸುವ ಕುರಿತು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಮಮಇ:320:ಪಿಹೆಚ್‌ಪಿ:2014(ಭಾಗ) ದಿನಾಂಕ:25.09.2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಹಾರ್ಡ್‌ವೇರ್, ಸಾಫ್ಟ್‌ವೇರ್ ಮತ್ತು ಇತರೆ ಪರಿಕರ ಸೇವೆಗಳನ್ನು ಪಡೆಯಲು ತಾಂತ್ರಿಕ ಸಲಹೆ ನೀಡುವ ಸಲುವಾಗಿ ಈ ಕೆಳಕಂಡ ಸದಸ್ಯರನ್ನೊಳಗೊಂಡ Technical Advisory Panel (TAP) ಸಮಿತಿಯನ್ನು ರಚಿಸಲಾಗಿದೆ.

25/10/14

| ಕ್ರ ಸಂ | ಸದಸ್ಯರ ವಿವರ ಮತ್ತು ವಿಳಾಸ | ಪದನಾಮ |
|---|---|---|
| 1. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು | ಅಧ್ಯಕ್ಷರು |
| 2. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ವೆಚ್ಚ), ಬೆಂಗಳೂರು. | ಸದಸ್ಯರು |

25/10/14



Scanned with CamScanner

| | | |
|---|---|---|
| 3. | ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಆ.ಸು(ಇ-ಆಡಳಿತ) ಇಲಾಖೆ, ನೆಲಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು. | ಸದಸ್ಯರು |
| 4. | ನಿರ್ದೇಶಕರು, ಯೋಜನಾ ಇಲಾಖೆ, ಪಿ.ಎಂ.ಐ ವಿಭಾಗ, ಬಹುಮಹಡಿಗಳ ಕಟ್ಟಡ , ಬೆಂಗಳೂರು | ಸದಸ್ಯರು |
| 5. | ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ನೆಲಮಹಡಿ, ಪೋಡಿಯಂ ಬ್ಲಾಕ್, ಬೆಂಗಳೂರು. | ಸದಸ್ಯರು |
| 6. | ಉಪ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ಬೆಂಗಳೂರು | ಸದಸ್ಯ ಕಾರ್ಯದರ್ಶಿ |
| 7. | ಶ್ರೀ ಎಸ್.ರಾಮನಾಥನ್, ಮುಖ್ಯಸ್ಥರು, ಹೆಡ್.ಸಿ.ಎನ್.ಡಿ., ಕಂಪ್ಯೂಟರ್ ಇನ್‌ಫಾರ್ ಮೇಷನ್ ಗ್ರೂಪ್, ಐ.ಎನ್.ಎಸ್.ಎ.ಟಿ ಕಟ್ಟಡ, 5ನೇ ಮಹಡಿ, ಇಸ್ರೋ ಸೆಟ್‌ಲೈಟ್ ಸೆಂಟರ್, ಏರ್‌ಪೋರ್ಟ್ ರಸ್ತೆ, ಬೆಂಗಳೂರು-560017 | ತಾಂತ್ರಿಕ ತಜ್ಞರು, |
| 8. | ಪ್ರೊ|ಚಂದ್ರಶೇಖರ್ ರಾಮನಾಥನ್, ಇಂಟರ್‌ನ್ಯಾಷನಲ್ ಇನ್ಸ್‌ಟ್ಯೂಟ್ ಆಫ್ ಟೆಕ್ನಾಲಜಿ, ಎಲೆಕ್ಟ್ರಾನಿಕ್ ಸಿಟಿ, ಬೆಂಗಳೂರು-560100 | ತಾಂತ್ರಿಕ ತಜ್ಞರು, |

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲಲಿತಾ)
ಸರ್ಕಾರದ ಅಧೀನ ಕಾರ್ಯದರ್ಶಿ-2
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ
ದೂರವಾಣಿ: 2203 2240.

ರಿಗೆ.,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ವೆಚ್ಚ), ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿ.ಆ.ಸು.(ಇ-ಆಡಳಿತ) ಇಲಾಖೆ, ನೆಲಮಹಡಿ, ಬಹುಮಹಡಿಗಳ ಬೆಂಗಳೂರು.
4. ನಿರ್ದೇಶಕರು, ಯೋಜನಾ ಇಲಾಖೆ, ಪಿ.ಎಂ.ಐ ವಿಭಾಗ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
5. ನಿರ್ದೇಶಕರು, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ, ನೆಲಮಹಡಿ, ಪೋಡಿಯಂ

Scanned with CamScanner